ಕಲಕಿ ಕುಡಿಯುವ ಈ ಜ್ಯೂಸ್ ಅನ್ನು ನಾನೂ ಕುಡಿಯುವುದಲ್ಲದೆ, ಮನೆಗೆ ಬಂದವರಿಗೂ ಕೊಡುತ್ತಿದ್ದೆ. 'ಲೇಬಲ್ ಓದಿ' ಎಂದ ಮೇಲೆ, ಅದರಲ್ಲಿರುವ ಇನ್‌ಗ್ರೇಡಿಯೆಂಟ್ಸ್ ಓದುತ್ತೇನೆ, ಅಲ್ಲಿತ್ತು 'ಸಕ್ಕರೆ, ನಿಂಬೆ ರಸ, ಶುಂಠಿ, ಪ್ರಿಸರ್ವೇಟಿವ್, ನೇಚರ್ ಐಡೆಂಟಿಕಲ್ ಕೃತಕ ಫ್ಲೇವರ್ಸ್'. ಬೆರಗಾದೆ, ರಾಜೇಶ್ವರಿಯವರು 'ಮೊದಲಿಗೇ ಸಕ್ಕರೆ ಇತ್ತು ಎಂದರೆ ಅದು ಅತಿ ಹೆಚ್ಚಿರುತ್ತದೆ' ಎಂದೂ ತಿಳಿಸಿದ್ದರು. ತಕ್ಷಣ ಈ ಸಿದ್ಧಜ್ಯೂಸ್ ಬಾಟಲಿ ತರುವುದು ನಿಲ್ಲಿಸಿದೆ. ತಾಜಾ ನಿಂಬೆ ಹಣ್ಣು, ಶುಂಠಿ ಈಗ ಸದಾ ಮನೆಯಲ್ಲಿರುತ್ತದೆ. ಸಣ್ಣ ಶ್ರಮದ ಕೆಲಸ. ಶುಂಠಿ ಜಜ್ಜಿ, ನಿಂಬೆ ಹಿಂಡಿ, ಅದಕ್ಕೆ ಒಂದೆರಡು ಏಲಕ್ಕಿಯನ್ನೂ ಕುಟ್ಟಿ ಹಾಕಿ, ಬೆಲ್ಲ ಸೇರಿಸಿ ಕುಡಿಯುತ್ತೇನೆ, ಗಂಡನಿಗೂ ಕುಡಿಸುತ್ತೇನೆ.

ಮತ್ತೊಂದು ಬ್ರಾಂಡಿನ ಕಿತ್ತಳೆ ಹಾಗೂ ಮಾವಿನ ರಸವನ್ನೂ ತರುತ್ತಿದ್ದೆ. ನಾನು ಆರಿಸಿಕೊಂಡ ಡಬ್ಬಿಯ ಮೇಲೆ 'ಆ್ಯಡೆಡ್ ಶುಗರ್ ಇಲ್ಲ, ಪ್ರಿಸರ್ವೇಟಿವ್ ಇಲ್ಲ, ಬಣ್ಣ ಸೇರಿಸಿಲ್ಲ, ಕೃತಕ ಪರಿಮಳ ಹಾಕಿಲ್ಲ' ಎಂದು ದಪ್ಪ ಅಕ್ಷರದಲ್ಲಿ ಬರೆದಿದ್ದನ್ನು ಓದಿದ ಕಾರಣ, ತಂದು ಇಟ್ಟುಕೊಂಡಿದ್ದೆ. ಮೇಡಂ ಲೇಬಲ್ ಓದಿ ಎಂದ ಮೇಲೆ 'ಇನ್‌ಗ್ರೇಡಿಯೆಂಟ್ಸ್' ನೋಡಿದೆ, ಅಲ್ಲಿ ಹಣ್ಣಿನ ರಸದ ಕಾನ್‌ಸೆಂಟ್ರೇಟ್ ಜೊತೆಗೆ ಸಕ್ಕರೆಯೂ ಇತ್ತು, 'ಪ್ರಾಸೆಸ್ಡ್ ಶುಗರ್'! ಈ ಸಂಸ್ಕರಿಸಿದ ಸಕ್ಕರೆಯಲ್ಲಿ ಪೌಷ್ಟಿಕಾಂಶಗಳಿಲ್ಲ, ಇದು ಸುಲಭವಾಗಿ ದೇಹದಲ್ಲಿ ವಿಘಟನೆಗೊಂಡು, ಸಕ್ಕರೆಯ ಅಂಶವನ್ನು ರಕ್ತದಲ್ಲಿ ವೇಗವಾಗಿ ಹೆಚ್ಚಿಸುತ್ತದೆ. ಹೀಗೆ ಸಂಸ್ಕರಿಸಿದ ಸಕ್ಕರೆಯಿಂದಾಗುವ 'ಶುಗರ್ ಸ್ಪೈಕ್ಸ್' ಅನಾರೋಗ್ಯಕರವಾದದ್ದು. ಇವನ್ನು ತರುವುದೂ ನಿಲ್ಲಿಸಿದೆ. ಸಮಾರಂಭಗಳಿಗೆ ಹೋದಾಗ, ಅಪರೂಪಕ್ಕೆ ಕುಡಿಯುವುದುಂಟು. ಉಳಿದಂತೆ ಮಾರುಕಟ್ಟೆಯಲ್ಲಿ ಸದಾ ಸಿಗುವ ತಾಜಾ ಹಣ್ಣುಗಳನ್ನು ತಂದು, ದೈನಂದಿನ ಆಹಾರದಲ್ಲಿ ಅಳವಡಿಸಿಕೊಂಡೆ.

ಆರೋಗ್ಯದ ಆಗರವಾದ ಬಾಳೆಹಣ್ಣು, ಪರಂಗಿ, ದಾಳಿಂಬೆ ಮುಂತಾದವು ವರ್ಷವಿಡೀ ಸಿಗುತ್ತವೆ. ನಾವು ತಿನ್ನುತ್ತಿರುವುದು ಏನು ಎಂದು ಸ್ಪಷ್ಟವಾದರೂ ಆಗಿರುತ್ತದೆ. ಜೊತೆಗೆ ಈ ಸಹಜವಾದ ಹಣ್ಣುಗಳಲ್ಲಿ ದೇಹಕ್ಕೆ ಬೇಕಾದ ಸಕ್ಕರೆ ಅಂಶ ಇತರ ವಿಟಮಿನ್ ಹಾಗೂ ನಾರಿನೊಡನೆ ಕೂಡಿದ್ದು, ದಿಢೀರ್ ಎಂದು ದೇಹದಲ್ಲಿ ಸಕ್ಕರೆಯ ಅಂಶವನ್ನು ಏರಿಸುವುದಿಲ್ಲ.

ರಾಜೇಶ್ವರಿಯವರು ವಿವರಿಸಿದ್ದರು, ''ಒಳ್ಳೆಯ ಬ್ರಾಂಡ್‌ನ ಜ್ಯೂಸ್‌ನಲ್ಲಿ ದಿಟವಾದ ಹಣ್ಣಿನ ರಸವೇ ಇದ್ದರೂ 'ಆಡೆಡ್ ಶುಗರ್' ಅಲ್ಲದೆ, ಹೆಚ್ಚು ಸಮಯ ಶೆಲ್ಫ್ ಮೇಲೆ ಉಳಿಯಲು ಪ್ರಿಸರ್ವೇಟಿವ್, ಆಕರ್ಷಕವಾಗಿ ಕಾಣಲು ಕೃತಕ ಬಣ್ಣ, ಪರಿಮಳ ಸೇರಿಸಿರಬಹುದು''. ಮತ್ತೂ ಅರಿವಾಯಿತು, 'ನೇಚರ್ ಐಡೆಂಟಿಕಲ್ ಫ್ಲೇವರ್ಸ್' ಎಂದೊಡನೆ ಅವು ಸಹಜವಾದ, ಪ್ರಕೃತಿದತ್ತವಾದ ಪರಿಮಳಗಳಾಗಿರಬೇಕಿಲ್ಲ, ಕೃತಕವಾಗಿರಬಲ್ಲವು. ಇವು ಸಹಜವಾಗಿ ದೊರೆಯುವ ಪದಾರ್ಥಗಳ ರಾಸಾಯನಿಕವಾಗಿ ತಯಾರಿಸಿದ 'ಎಕ್ಸ್ಟ್ರಾಕ್ಟ್ ಕಾಪಿ' ಆಗಿರಬಲ್ಲವು. ಉದಾಹರಣೆಗೆ ವೆನಿಲ್ಲಾದ ಪರಿಮಳವನ್ನು ವೆನಿಲ್ಲಾ ಗಿಡದಿಂದ ಪಡೆಯುವ ಬದಲು, ಕೃತಕವಾಗಿ ಆ ವೆನಿಲ್ಲಾ ಸುವಾಸನೆಯನ್ನು ತಯಾರಿಸಿರುತ್ತಾರೆ. ಆದರೆ 'ನೇಚರ್ ಐಡೆಂಟಿಕಲ್' ಎಂಬ ಪದಪುಂಜ ನಮ್ಮನ್ನು ಹಾದಿತಪ್ಪಿಸಬಲ್ಲದು, ವೆನಿಲ್ಲಾ ಗಿಡದಿಂದ ಪಡೆದದ್ದು ಅನಿಸಿಬಿಡುತ್ತದೆ.

## ನಿಜಕ್ಕೂ 'ಆರ್ಗಾನಿಕ್' ಏನು?

ಈ'ಹರ್ಬಲ್', 'ಆರ್ಗಾನಿಕ್', 'ನ್ಯಾಚುರಲ್' ಎಂಬ ಹೆಸರುಗಳಿಗೆ ಮರುಳಾಗಬಾರದು, ಅದರಲ್ಲೇನಿದೆ ಎಂದು ಲೇಬಲ್ ನೋಡಿಯೇ ತಿಳಿಯುವುದು ಜಾಣತನ. ಸಾವಯವ ಕೃಷಿಯ ಉತ್ಪನ್ನಗಳನ್ನು ನಾನೂ ಹುಡುಕಿ ಹೋಗುವುದುಂಟು. ಹತ್ತಿರದ ಬಡಾವಣೆಯಲ್ಲೊಂದು 'ಆರ್ಗಾನಿಕ್' ಎಂಬ ಪದವನ್ನು ಹೆಸರಿನಲ್ಲಿ ಇಟ್ಟುಕೊಂಡಿರುವ ಅಂಗಡಿಗೆ ಹೋದೆ. ಬಹಳ ಜನ ಆ ಅಂಗಡಿಯಲ್ಲಿ ಇರುವ ವಸ್ತುಗಳೆಲ್ಲ ಆರ್ಗಾನಿಕ್ ಎಂದುಕೊಂಡಂತಿತ್ತು. ನಾನೂ ಹಾಗೆಯೇ ಭಾವಿಸಿ ಒಳಹೊಕ್ಕೆ. ಒಂದು ಅಕ್ಕಿಯ ಪ್ಯಾಕೆಟ್ ತೆಗೆದುಕೊಂಡು ನೋಡಿದೆ, 'ಶೇ. 100 ನ್ಯಾಚುರಲ್' ಎಂದು ಬರೆದಿತ್ತು. ಅಕ್ಕಿ ನ್ಯಾಚುರಲ್ ಅಲ್ಲದೆ ಕೃತಕ ಇರಲು ಸಾಧ್ಯವೆ? ಇದು ಹಾದಿ ತಪ್ಪಿಸುವ ಲೇಬಲ್ ಎಂದು ಅರಿವಾಯಿತು. ಮತ್ತೊಂದು ತೆಗೆದುಕೊಂಡು ನೋಡಿದೆ 'ಶೇ. 200 ಆರ್ಗಾನಿಕ್' ಎಂದಿತ್ತು. ಆದರೆ ಅದರಲ್ಲೂ 'ಆರ್ಗನಿಕಲಿ ಗ್ರೋನ್' ಎಂಬ ವಿವರಗಳಿರಲಿಲ್ಲ, 'ಸಾವಯವ' ಎಂದು ಪ್ರಮಾಣೀಕರಣದ 'ಲೋಗೋ' ಇರಲಿಲ್ಲ. ಇವುಗಳ ಜೊತೆಯಲ್ಲಿ ಇತರ ಬ್ರಾಂಡ್‌ನ ದಿಟವಾದ ಸಾವಯವ ಕೃಷಿಯ ಉತ್ಪಾದನೆಗಳನ್ನು ಇಟ್ಟಿದ್ದು, ಅವು ಹೆಚ್ಚು ದುಬಾರಿಯಾದ ಕಾರಣ, ಇವೆರಡರ ವ್ಯತ್ಯಾಸ ತಿಳಿಯದೆ ಗ್ರಾಹಕರು ಇವನ್ನು ಕೊಳ್ಳುತ್ತಾರೆ. 'ಸಾವಯವ ಕೃಷಿಯಿಂದ ಬೆಳೆದ ಉತ್ಪಾದನೆಗಳಿಗೆ, ಹೆಸರನ್ನು ನೋಡಬೇಡಿ, ಪ್ರಾಡಕ್ಟ್ ಡಿಸ್ಕ್ರಿಪ್ಷನ್ ನೋಡಬೇಕು. ಆರ್ಗಾನಿಕ್ ಆಹಾರಗಳು, ಉತ್ಪನ್ನಗಳು ಎಂದರೆ, ಯಾವುದೇ ಕೃತಕವಾಗಿ ತಯಾರಿಸಿದ ರಾಸಾಯನಿಕ ಕೀಟನಾಶಕ ಅಥವಾ ರಾಸಾಯನಿಕ ಗೊಬ್ಬರ ಬಳಸದೆ ಬೆಳೆದ ಬೆಳೆ, ಹಾಗೂ ಕುಲಾಂತರಿ ಅಲ್ಲದ (ಜೆನೆಟಿಕಲಿ ಮಾಡಿಫೈಡ್ ಆರ್ಗ್ಯಾನಿಸ್ಮ್ ಇಲ್ಲದ) ಉತ್ಪನ್ನ. 'ಫುಡ್ ಸೇಫ್ಟಿ ಅಂಡ್ ಸ್ಟಾಂಡರ್ಡ್ ಆಫ್ ಇಂಡಿಯಾ'ದ (FSSAI) ಆರ್ಗಾನಿಕ್ ಲೋಗೋ ನೋಡಬೇಕು' ಎಂದು ತಿಳಿದವರು ನನ್ನನ್ನು ಎಚ್ಚರಿಸಿದರು.

## 'ಹರ್ಬಲ್' ಎಂದೊಡನೆ ಗಿಡಮೂಲಿಕೆಗಳಿವೆಯೆ?

ನನ್ನ ಇದೇ ಗೆಳತಿ 'ಹರ್ಬಲ್' ಎಂದು ಹೆಸರಲ್ಲಿ ಇಟ್ಟುಕೊಂಡ, 'ಅತಿವೇಗದಲ್ಲಿ ತೂಕ ಕಡಿಮೆ ಆಗುತ್ತದೆ, ಆರೋಗ್ಯಕ್ಕೆ ಒಳ್ಳೆಯದಾದ ಪೌಷ್ಟಿಕಾಂಶವಿದೆ' ಎಂದು ಬಲವಾಗಿ ನಂಬಿಸುವ, ಮತ್ತೊಂದು ಉತ್ಪನ್ನವನ್ನೂ ಬಳಸಿದಂತಿತ್ತು.

ಇಂತಹದೊಂದು ಜಾಗತಿಕ ಕಂಪನಿಯ ಪ್ರಾಡಕ್ಟ್ ಇದೆ ಎಂದು ನನಗೆ ತಿಳಿದು ಬಂದದ್ದು ಬಲು ಆಕಸ್ಮಿಕವಾಗಿ. ಒಂದು ದಿನ ನನ್ನ ನಿಕಟ ಸಂಬಂಧಿಕರ ಮನೆಗೆ ಹೋಗುತ್ತೇನೆ, ಇಡೀ ಹಾಲ್‌ನಲ್ಲಿ ದೊಡ್ಡ ದೊಡ್ಡ ಪೋಸ್ಟರ್‌ಗಳು, ಸರ್ಟಿಫಿಕೇಟ್‌ಗಳು ಅಂಟಿಸಿದ್ದವು. ಹೆಸರಿಗೆ ಅದೊಂದು 'ಹೆಲ್ತ್ ಕ್ಲಬ್' ಎಂದು ನಡೆಸುತ್ತಿದ್ದರು. ಆದರೆ ಬಲವಾಗಿ ಮಾರಾಟವಾಗುತ್ತಿದ್ದದ್ದು 'ಹರ್ಬಲ್' ಎಂದು ಹೆಸರಿನಲ್ಲಿ ಇಟ್ಟುಕೊಂಡ ಡಬ್ಬದಲ್ಲಿ ಬರುವ ವಿದೇಶದ ಪ್ರಾಡಕ್ಟ್. ನನ್ನ ಈ ಹಿರಿಯ ಸಂಬಂಧಿಕರಾದ ಮಹಿಳೆ ಬದುಕು ಪೂರಾ ಹಳ್ಳಿಯಲ್ಲೇ ಕಳೆದವರು, ಮಕ್ಕಳು ಓದಿದಾಗ ಪಟ್ಟಣಕ್ಕೆ ಬಂದವರು. ಈಕೆ ಹತ್ತನೇ ಕ್ಲಾಸ್ ಓದಿದವರು, ಸ್ವಂತ ದುಡಿಮೆಯ ಹಣವನ್ನು ಹಿಂದೆ ಕಂಡವರಲ್ಲ. ಇಂತಹ ಜನಸಾಮಾನ್ಯರನ್ನು ತಮ್ಮ ಪ್ರಾಡಕ್ಟ್ ಮಾರಲು ಬಳಸಿಕೊಳ್ಳುವುದು ಈ ವಿದೇಶೀ ಕಂಪನಿಯ ಮಾರ್ಕೆಟಿಂಗ್ ತಂತ್ರವಿದ್ದ ಹಾಗಿದೆ. ಒಂದು ಡಬ್ಬಿ ಮಾರಿದರೂ ದೊಡ್ಡ ಕಮಿಷನ್!

PGS-INDIA GREEN | PGS-INDIA ORGANIC | Jaivik Bharat | India Organic

ಆಹಾರದ ಸುರಕ್ಷತೆ ಹಾಗೂ ಗುಣಮಟ್ಟ ಖಾತರಿಪಡಿಸುವ 'ಫುಡ್ ಸೇಫ್ಟಿ ಅಂಡ್ ಸ್ಟ್ಯಾಂಡರ್ಡ್ ಆಫ್ ಇಂಡಿಯಾ'ದ (FSSAI) ಲಾಂಛನಗಳು